ದ. ಕನ್ನಡ ಜಿಲ್ಲೆಯಲ್ಲಿ ಅಂಗನವಾಡಿ ಕೇಂದ್ರಗಳು

414 -ಶ್ರೀ ಕೆ. ಜಯರಾಮಶೆಟ್ಟಿ (ಉಳ್ಳಾಲ) : ಮಾನ್ಯ ಮಹಿಳಾ ಮತ್ತು ಮಕ್ಕಳ ಕಲ್ಯಾಣ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ದಕ್ಷಿಣ ಕನ್ನಡ ಜಿಲ್ಲೆಯಲ್ಲಿರುವ ಅಂಗನವಾಡಿ ಕೇಂದ್ರಗಳ ಒಟ್ಟು ಸಂಖ್ಯೆ ಎಷ್ಟು (ಕ್ಷೇತ್ರವಾರು ವಿವರ ನೀಡುವುದು)*

ಆ) *ಇವುಗಳಲ್ಲಿ ಸ್ವಂತ ಕಟ್ಟಡ ಇಲ್ಲದಿರುವ ಕೇಂದ್ರಗಳ ಸಂಖ್ಯೆ ಎಷ್ಟು?*

ಇ) *ಸ್ವಂತ ಕಟ್ಟಡ ಇಲ್ಲದಿರುವ ಅಂಗನವಾಡಿ ಕೇಂದ್ರಗಳಿಗೆ ಕಟ್ಟಡ ಒದಗಿಸಲು ಅಥವಾ ಬಾಡಿಗೆ ಹಣ ನೀಡಲು ಸರ್ಕಾರ ಕೈಗೊಂಡ ಕ್ರಮಗಳೇನು?*

ಶ್ರೀಮತಿ ವಿಮಲಾಬಾಯಿ ಜಗದೇವ್‌ರಾವ್ ದೇಶ್‌ಮುಖ್ (ಮಹಿಳಾ ಮತ್ತು ಮಕ್ಕಳ ಕಲ್ಯಾಣ ರಾಜ್ಯ ಸಚಿವರು) :

ಅ) ದಕ್ಷಿಣ ಕನ್ನಡ ಜಿಲ್ಲೆಗೆ 1686 ಅಂಗನವಾಡಿ ಕೇಂದ್ರಗಳು ಮಂಜೂರಾಗಿದ್ದು ಅವುಗಳಲ್ಲಿ ಸದ್ಯ 1611 ಅಂಗನವಾಡಿ ಕೇಂದ್ರಗಳು ಕಾರ್ಯ ನಿರ್ವಹಿಸುತ್ತಿವೆ. ಉಡುಪಿ ಜಿಲ್ಲೆಯ ಮೂಡಬಿದ್ರೆ ಕ್ಷೇತ್ರದ 89 ಕೇಂದ್ರಗಳು ದಕ್ಷಿಣ ಕನ್ನಡ ಜಿಲ್ಲೆಯ ವ್ಯಾಪ್ತಿಗೊಳಪಡುತ್ತವೆ. ಕ್ಷೇತ್ರವಾರು ಅಂಗನವಾಡಿ ಕೇಂದ್ರಗಳ ವಿವರ ಕೆಳಕಂಡಂತಿದೆ.

ಕ್ರಮ ಸಂಖ್ಯೆ	ಕ್ಷೇತ್ರದ ಹೆಸರು	ಅಂಗನವಾಡಿ ಕೇಂದ್ರಗಳ ಸಂಖ್ಯೆ
1.	ಸುಳ್ಯಾ	230
2.	ಬೆಳ್ತಂಗಡಿ	193
3.	ಪುತ್ತೂರು	313
4.	ಬಂಟ್ವಾಳ	224
5.	ವಿಟ್ಲ	328
6.	ಉಳ್ಳಾಲ	116
7.	ಸುರತ್ಕಲ್	124
8.	ಮುಲ್ಕಿ	49
9.	ಮೂಡಬಿದ್ರೆ	89
10.	ಮಂಗಳೂರು	34
		1700

ಆ) ಇವುಗಳಲ್ಲಿ ಸ್ವಂತ ಕಟ್ಟಡ ಇಲ್ಲದಿರುವ ಕೇಂದ್ರಗಳ ಸಂಖ್ಯೆ 682.

೫) ಸ್ವಂತ ಕಟ್ಟಡ ಇಲ್ಲದಿರುವ ಕೇಂದ್ರಗಳಿಗೆ ಹಂತ ಹಂತವಾಗಿ ಕಟ್ಟಡ ನಿರ್ಮಿಸಲಾಗುತ್ತಿದೆ. ಹಾಗೂ ಬಾಡಿಗೆ ಕಟ್ಟಡಗಳಲ್ಲಿ ಸದ್ಯ ಕಾರ್ಯನಿರ್ವಹಿಸುತ್ತಿರುವ ಕೇಂದ್ರಗಳಿಗೆ ಭಾರತ ಸರ್ಕಾರದ ಮಾರ್ಗಸೂಚಿಗಳಂತೆ ಬಾಡಿಗೆ ಹಣ ನೀಡಲಾಗುತ್ತದೆ.

ಶ್ರೀ ಕೆ. ಜಯರಾಮಶೆಟ್ಟಿ : ಮಾನ್ಯ ಅಧ್ಯಕ್ಷರೆ, ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಇರತಕ್ಕ ಒಟ್ಟು ಅಂಗನವಾಡಿಗಳ ಸಂಖ್ಯೆ ಎಷ್ಟು ಎಂದು ಕೇಳಿರುವುದಕ್ಕೆ ಒಂದು ಕಡೆ 1686 ಎಂದು ಹೇಳಿದ್ದಾರೆ. ಆದರೆ ವಿಧಾನ ಸಭಾ ಕ್ಷೇತ್ರಗಳ ಲೆಕ್ಕಾಚಾರದಲ್ಲಿ 1700 ಎಂದು ಹೇಳಿದ್ದಾರೆ. ಇಲ್ಲಿ 14 ವ್ಯತ್ಯಾಸವಾಗಿರುವುದರಿಂದ ಇದರಲ್ಲಿ ಯಾವುದು ಸರಿ ಎಂದು ಮಾನ್ಯ ಸಚಿವರು ಹೇಳಬೇಕು. ಇನ್ನು 1600 ಅಂಗನವಾಡಿ ಕೇಂದ್ರಗಳು ಕಾರ್ಯ ನಿರ್ವಹಿಸುತ್ತಿವೆ ಎಂದು ಹೇಳಿದ್ದಾರೆ. ಇನ್ನೂ 75 ಅಂಗನವಾಡಿ ಕೇಂದ್ರಗಳು ಏತಕ್ಕಾಗಿ ಕಾರ್ಯ ನಿರ್ವಹಿಸುತ್ತಿಲ್ಲವೆಂಬುದನ್ನು ಹೇಳಬೇಕು. ಇನ್ನು ಹಾಲಿ ಇರತಕ್ಕಂಥ ಅಂಗನವಾಡಿಗಳಲ್ಲಿ ಶೇಕಡ 40ಕ್ಕೆ ಕಟ್ಟಡಗಳನ್ನು ಒದಗಿಸಿಲ್ಲ. ಇದಕ್ಕೆ ಏನು ಕಾರಣವೆಂಬುದನ್ನು ಅವರು ಹೇಳಬೇಕು.

ಶ್ರೀಮತಿ ವಿಮಲಾಬಾಯಿ ದೇಶಮುಖ್ : ಮಾನ್ಯ ಅಧ್ಯಕ್ಷರೆ, ಈ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಒಟ್ಟು 1700 ಅಂಗನವಾಡಿ ಕೇಂದ್ರಗಳಿದ್ದು ಇವುಗಳಲ್ಲಿ 682ಕ್ಕೆ ಕಟ್ಟಡಗಳನ್ನು ಒದಗಿಸಲಾಗಿದೆ. ಇನ್ನುಳಿದವುಗಳಿಗೆ ಜಿಲ್ಲಾ ಪಂಚಾಯತ್ ಮೂಲಕವಾಗಿ ಹಂತ ಹಂತವಾಗಿ ಕಟ್ಟಡಗಳನ್ನು ಒದಗಿಸಿಕೊಡುತ್ತೇವೆ.

ಶ್ರೀ ಕೆ. ಜಯರಾಮಶೆಟ್ಟಿ : ಹಂತ ಹಂತವಾಗಿ ಕಟ್ಟಡಗಳನ್ನು ಒದಗಿಸುತ್ತೇವೆ ಎಂದರೆ ನೀವು ಯಾವಾಗ ಒದಗಿಸುತ್ತೀರಿ ಎಂಬುದನ್ನು ನಾನು ಕೇಳುತ್ತಿದ್ದೇನೆ.

ಶ್ರೀಮತಿ ವಿಮಲಾಬಾಯಿ ದೇಶಮುಖ್ : ಜಿಲ್ಲಾ ಪಂಚಾಯತ್ ವ್ಯಾಪ್ತಿಯಲ್ಲಿ ಅದು ಇರುವುದರಿಂದ ತಾವು ಅವರಿಗೆ ಇಂಥಿಂಥ ಕಡೆ ಕಟ್ಟಡಗಳು ಬೇಕು ಎಂದರೆ ಅವರು ಅದರ ಬಗ್ಗೆ ಕ್ರಮ ತೆಗೆದುಕೊಳ್ಳುತ್ತಾರೆ.

ಶ್ರೀ ಕೆ. ಜಯರಾಮಶೆಟ್ಟಿ : ರಾಜ್ಯ ಸರ್ಕಾರ ಇದಕ್ಕೆ ಹಣ ಕೊಡುತ್ತದಲ್ಲಾ.

ಶ್ರೀಮತಿ ವಿಮಲಾಬಾಯಿ ದೇಶಮುಖ್ : ರಾಜ್ಯ ಸರ್ಕಾರ 50 ಸಾವಿರ ರೂ.ಗಳನ್ನು ಕೊಡುತ್ತದೆ. ಆದರೆ ಉಳಿದ ಹಣವನ್ನು ಜಿಲ್ಲಾ ಪಂಚಾಯತ್ ಒದಗಿಸಿಕೊಡುತ್ತದೆ.

ಶ್ರೀ ಕೆ. ಜಯರಾಮಶೆಟ್ಟಿ : ನನಗೆ ತಿಳಿದಿರುವ ಹಾಗೆ ಕೆಲವೊಂದು ಅಂಗನವಾಡಿ ಕೇಂದ್ರಗಳು ಬಾಡಿಗೆ ಕಟ್ಟಡದಲ್ಲಿ ನಡೆಯುತ್ತಿವೆ. ಬಾಡಿಗೆಗೂ ಕಟ್ಟಡ ಸಿಗದಿರುವ ಕಡೆ ಕೆಲವರು ತಮ್ಮ ಮನೆಗಳಲ್ಲಿಯೇ ನಡೆಸುತ್ತಿದ್ದಾರಂತೆ. ಇದರಿಂದಾಗಿ ಮನೆಯವರಿಗೂ ತುಂಬಾ ತೊಂದರೆಯಾಗುತ್ತಿದೆಯಂತೆ. ಆದುದರಿಂದ ನೀವು ಇದನ್ನು ಪ್ರಾಥಮಿಕ ಶಾಲೆಗಳ ಹತ್ತಿರದಲ್ಲಿಯೇ ನಡೆಸಿದರೆ ಹೆಚ್ಚು ಅನುಕೂಲವಾಗುತ್ತದೆ. ಆದುದರಿಂದ ಇದರ ಬಗ್ಗೆ ನೀವು ಪರಿಶೀಲನೆ ಮಾಡುತ್ತೀರಾ ? ನೀವು ಮಕ್ಕಳ ಸಂಖ್ಯೆಗೆ ಅನುಗುಣವಾಗಿ ಕೇಂದ್ರಗಳನ್ನು ರಚಿಸುತ್ತಿದ್ದೀರಾ ಅಥವಾ ಬಡತನದ ರೇಖೆಯನ್ನು ಗಮನದಲ್ಲಿಟ್ಟುಕೊಂಡು ಈ ಕೇಂದ್ರಗಳನ್ನು ತೆರೆಯುತ್ತಿದ್ದೀರಾ ಎಂಬ ಬಗ್ಗೆ ಹೇಳಬೇಕು.

ಅಧ್ಯಕ್ಷರು : ಮಾನ್ಯ ಜಯರಾಮಶೆಟ್ಟಿಯವರೇ, ನಿಮ್ಮ ಪ್ರಶ್ನೆಯೇ ತರ್ಕಬದ್ಧವಾಗಿಲ್ಲ. ಅಂಗನವಾಡಿ ಕೇಂದ್ರಗಳನ್ನು ಪ್ರಾರಂಭ ಮಾಡಬೇಕಾದರೆ ಇರತಕ್ಕಂಥ ಗೈಡ್‌ಲೈನ್ಸ್‌ಗಳ ಬಗ್ಗೆ ನಮಗೆ ಮತ್ತು ನಿಮಗೆಲ್ಲಾ ತಿಳಿದೇ ಇರುತ್ತದೆ. ಇನ್ನು ಪ್ರತಿ ವರ್ಷ ಕಟ್ಟಡ ಕಟ್ಟುವುದಕ್ಕಾಗಿ ಇಲಾಖೆಯಿಂದ ಇಷ್ಟು ಹಣವೆಂದು ಕೊಡುತ್ತಾರೆ, ಉಳಿದುದನ್ನು ಜಿಲ್ಲಾ ಪಂಚಾಯತ್‌ನವರು ಇ.ಎ.ಎಸ್. ಪ್ರೋಗ್ರಾಂನಲ್ಲಿ ಅಡ್ಜೆಸ್ಟ್ ಮಾಡಿಕೊಂಡು ಕಟ್ಟಡ ಕಟ್ಟಿಸುತ್ತಾರೆ. ಈಗಾಗಲೇ 682ಕ್ಕೆ ಕಟ್ಟಡವನ್ನು ಕಟ್ಟಿದ್ದಾರೆ, ಉಳಿದುದ್ದಕ್ಕೆ ಹಣ ಬಂದ ಹಾಗೆ ಕಟ್ಟಡಗಳನ್ನು ಕಟ್ಟಿಸುತ್ತಾರೆ. ಎಲ್ಲಾ ಕಡೆಯೂ ಹೀಗೆಯೇ ಆಗಿರುವುದು. ನಿಮ್ಮಲ್ಲಿ ಮಾತ್ರವಲ್ಲ, ಎಲ್ಲಾ ಕಡೆಯೂ ಅಂಗನವಾಡಿ ಕೇಂದ್ರಗಳು ಖಾಸಗಿ ಕಟ್ಟಡಗಳಲ್ಲಿಯೇ ನಡೆಯುತ್ತಿರುವುದು. ಇದನ್ನು ಪ್ರಾಥಮಿಕ ಶಾಲೆಗಳ ಹತ್ತಿರವೇ ಮಾಡಿ ಎಂದರೆ ಇವರು ಅದನ್ನು ಮಾಡುವುದಕ್ಕಾಗುವುದಿಲ್ಲ. ಆ ಸ್ಥಳದಲ್ಲಿರುವ ನೀವು ಅದನ್ನು ಮಾಡಿಕೊಳ್ಳಬೇಕು. ನಿಮ್ಮ ಪ್ರಶ್ನೆಗಳೇ ಕೆಲವೊಮ್ಮೆ ಸರಿ ಇರುವುದಿಲ್ಲ.

ಶ್ರೀ ಡಿ.ವಿ. ಸದಾನಂದಗೌಡ : ಮಾನ್ಯ ಅಧ್ಯಕ್ಷರೆ, ಲೋಕಸಭಾ ಸದಸ್ಯರ ನಿಧಿಯಿಂದ ಕೂಡ ಕೆಲವಾರು ಕಡೆ ಅಂಗನವಾಡಿ ಕಟ್ಟಡಗಳನ್ನು ಕಟ್ಟಲಾಗಿದೆ. ಆದುದರಿಂದ ನಾನು ಹೇಳುವುದೇನೆಂದರೆ, ಈ ಇಲಾಖಾ ವತಿಯಿಂದ ಲೋಕಸಭಾ ಸದಸ್ಯರಿಗೆ ವಿನಂತಿಸಿಕೊಂಡು ಇಂಥ ಕಟ್ಟಡಗಳನ್ನು ಕಟ್ಟಬೇಕು ಎಂದು ಕೇಳಿಕೊಳ್ಳಬೇಕು.

ಅಧ್ಯಕ್ಷರು : ಇದು ಕೇಂದ್ರ ಸರ್ಕಾರದ ಸಹಯೋಗದಿಂದ ಆಗತಕ್ಕಂಥ ಕಾರ್ಯಕ್ರಮ ಎಂಬುದು ಎಲ್ಲರಿಗೂ ಗೊತ್ತಿದೆ ಮತ್ತು ಉತ್ತರದಲ್ಲೂ ಮಾನ್ಯ ಮಂತ್ರಿಯವರು ಅದನ್ನು ಹೇಳಿದ್ದಾರೆ. ಆದರೆ ಅವರು ಕೊಡುವಂಥ ಹಣವನ್ನು ಜಿಲ್ಲಾ ಪಂಚಾಯತ್‌ಗೆ ವರ್ಗ ಮಾಡುತ್ತಾರೆ. ಜಿಲ್ಲಾ ಪಂಚಾಯತ್‌ನವರು ಪ್ರತಿ ವರ್ಷ ಇಂತಿಷ್ಟು ಕಟ್ಟಡ ಎಂದು ಕಟ್ಟಡವನ್ನು ಕಟ್ಟುತ್ತಾರೆ. ಅದರ ಜೊತೆಗೆ ಇ.ಎ.ಎಸ್.ನಲ್ಲಿ ಮತ್ತಿತರ ಕಡೆಗಳಿಂದ ಹಣವನ್ನು ಅಡ್ಜೆಸ್ಟ್ ಮಾಡಿಕೊಂಡು ತಾಲ್ಲೂಕು ಪಂಚಾಯಿತಿ, ಜಿಲ್ಲಾ ಪಂಚಾಯಿತಿಯಲ್ಲಿ ಅವರು ಪ್ಲಾನ್ ಮಾಡಿಕೊಂಡು ಪ್ರತಿ ವರ್ಷ ಇಂತಿಷ್ಟು ಕಟ್ಟಡ ಎಂದು ತೆಗೆದುಕೊಂಡು ಕಟ್ಟಬೇಕು.

ಶ್ರೀ ಚಂದ್ರಶೇಖರ ನಾಯಕ್ : ಮಾನ್ಯ ಅಧ್ಯಕ್ಷರೆ, ಈ ಕಟ್ಟಡದ ಸಮಸ್ಯೆ ಎಲ್ಲರಿಗೂ ತಿಳಿದಿರುವ ವಿಷಯ. ಪ್ರತಿ ವಿಧಾನ ಸಭಾ ಕ್ಷೇತ್ರದಲ್ಲೂ ಸುಮಾರು 40 ರಿಂದ 50 ಮಕ್ಕಳು ಅಂಗನವಾಡಿ ಕೇಂದ್ರಕ್ಕೆ ಅಡ್ಮಿಷನ್ ಆಗುತ್ತಾರೆ. ಪ್ರತಿ ಕೇಂದ್ರಕ್ಕೆ 10 ಮಕ್ಕಳನ್ನು ಹೆಚ್ಚು ಮಾಡಿದರೆ ಕಟ್ಟಡ ಸಮಸ್ಯೆ ಸ್ವಲ್ಪ ಕಡಿಮೆಯಾಗುತ್ತದೆ.

ಅಧ್ಯಕ್ಷರು : ಇದನ್ನು ಬುದ್ಧಿವಂತಿಕೆಯಿಂದಲೂ ಮಾಡಬಹುದು. ಆಪರೇಷನ್ ಬ್ಲಾಕ್ ಬೋರ್ಡ್ ಕೆಳಗೆ ಸ್ಕೂಲ್ ಕಟ್ಟಡ ಎಂದು ತೋರಿಸಿ ಅಂಗನವಾಡಿಯನ್ನಾದರೂ ಮಾಡಿಕೊಳ್ಳಬಹುದು ಅಥವಾ ಪ್ರೌಢಶಾಲೆಯನ್ನಾದರೂ ಮಾಡಿಕೊಳ್ಳಬಹುದು. ಆದರೆ ಸ್ಕೂಲ್ ಬಿಲ್ಡಿಂಗ್ ಎಂದು ತೋರಿಸಿಕೊಳ್ಳಬಹುದು. ಇದನ್ನು ಗುಟ್ಟಾಗಿ ಮಾಡಬೇಕು.

ಶ್ರೀಮತಿ ಎನ್. ಜ್ಯೋತಿರೆಡ್ಡಿ : ಮಾನ್ಯ ಅಧ್ಯಕ್ಷರೆ, ಅಂಗನವಾಡಿ ಕೇಂದ್ರಕ್ಕೆ ಕಟ್ಟಡ ಕಟ್ಟುವುದಕ್ಕಾಗಿ ಸರ್ಕಾರ ಹಣ ಕೊಡುತ್ತದೆ. ಆಯಾ ಕ್ಷೇತ್ರದ ಶಾಸಕರು ಇಂಥಿಂಥ ಹಳ್ಳಿಗಳಲ್ಲಿ

ಕಟ್ಟಡಗಳನ್ನು ಕಟ್ಟಬೇಕು ಎಂದು ಪಟ್ಟಿಯನ್ನು ಮಾಡುತ್ತಾರೆ. ಅದಕ್ಕೆ ಸಂಬಂಧಪಟ್ಟಂತೆ ಜಿಲ್ಲಾ ಪಂಚಾಯತ್‌ನವರು ಇದೇ ಕಟ್ಟಡಗಳಿಗೆ ಪರ್ಮಿಷನ್ ಕೊಡುತ್ತಿಲ್ಲ. ಜಿಲ್ಲಾ ಪಂಚಾಯತ್‌ನವರು ತಮ್ಮದೇ ಆದ ಒಂದು ಪಟ್ಟಿಯನ್ನು ತಯಾರಿಸಿ ಇಂಥಿಂಥ ಹಳ್ಳಿಗಳಲ್ಲಿಯೇ ಕಟ್ಟಬೇಕು ಎಂದು ಹೇಳುತ್ತಾರೆ. ಹೀಗಾಗಿ ಎರಡೂ ಕಡೆಗಳಲ್ಲಿಯೂ ಕಟ್ಟಡ ಅರ್ಧಕ್ಕೆ ನಿಲ್ಲುವಂಥ ಪ್ರಸಂಗಗಳು ನಡೆಯುತ್ತಿವೆ. ಆದುದರಿಂದ ಸರ್ಕಾರದಿಂದ ಬರುವಂಥ ಹಣ ಹಾಗೂ ಜಿಲ್ಲಾ ಪಂಚಾಯತ್‌ನಿಂದ ಬರಬೇಕಾದ ಹಣ ಪಡೆಯಲು ಸರಿಯಾದ ಕೋ-ಆರ್ಡಿನೇಷನ್ ಎರಡೂ ಕಡೆಯಲ್ಲಿಯೂ ಇಲ್ಲವಾಗಿದೆ.

ಅಧ್ಯಕ್ಷರು : ಸರ್ಕಾರದಿಂದ ಬರತಕ್ಕಂಥ ಹಣ ನೇರವಾಗಿ ಜಿಲ್ಲಾ ಪಂಚಾಯತ್‌ಗೆ ಜಮಾ ಆಗುತ್ತದೆ. ಇದರ ಪ್ಲಾನ್ ಮಾಡತಕ್ಕಂಥ ಸಂಪೂರ್ಣ ಜವಾಬ್ದಾರಿಕೆ ಜಿಲ್ಲಾ ಪಂಚಾಯತ್‌ಗೆ ಇರುತ್ತದೆ. ತಾಲ್ಲೂಕು ಪಂಚಾಯಿತಿ ಮಟ್ಟದಲ್ಲಿ ಮಾಡಬೇಕಾದ ಕೆಲಸವನ್ನು ನೀವು ಮಾಡಬೇಕು.

ಶ್ರೀ ಎನ್. ಯೋಗೀಶ್ ಭಟ್ : ಮಾನ್ಯ ಅಧ್ಯಕ್ಷರೇ, ಸರ್ಕಾರದ ನಿಯಮಾವಳಿಗಳ ಪ್ರಕಾರ ಕನಿಷ್ಠ ವೇತನ ಎಂದು ನಿಗದಿಪಡಿಸಲಾಗಿದೆ. ಇದರ ಪ್ರಕಾರ 1,200-00 ರೂಪಾಯಿಗಳು ಕನಿಷ್ಠ ವೇತನವಾಗಿರುತ್ತದೆ. ಇದನ್ನು ಅಂಗನವಾಡಿ ಕಾರ್ಯಕರ್ತೆಯರಿಗೆ ಕೊಡಬೇಕೆಂದು ವಿನಂತಿ.

ಶ್ರೀಮತಿ ವಿಮಲಬಾಯಿ ದೇಶ್‌ಮುಖ್ : ಅಂಗನವಾಡಿ ಕಾರ್ಯಕರ್ತೆಯರಿಗೆ ನಾವು ವೇತನ ಎಂದು ಕೊಡುತ್ತಿಲ್ಲ. ಗೌರವ ಧನ ಎಂದು ಮಾತ್ರ ಕೊಡುತ್ತಿರುವುದು.

11.30 ಎ.ಎಂ

ಅಧ್ಯಕ್ಷರು : ಅಬ್ಸಲ್ಯೂಟ್ ಕ್ಲಾರಿಟಿ. ಅವರ ಗೌರವ ಹೆಚ್ಚು ಆದಹಾಗೆ ಗೌರವಧನ ಹೆಚ್ಚಾಗುತ್ತದೆ. ನಾನು ಹೇಳಿದ್ದು ತಮಗೆ ಕೇಳಿಸಲಿಲ್ಲ. ಅಸೆಂಬ್ಲಿಯಲ್ಲಿ ಬಹಳ ಸೂಕ್ಷ್ಮವಾಗಿ ಕೆಲಸ ಮಾಡಬೇಕು. ಅವರು ಹೇಳಿದರು ಈ ಅಂಗನವಾಡಿ ಕಾರ್ಯಕರ್ತೆಯರಿಗೆ ವೇತನ ಅಲ್ಲ, ಗೌರವಧನ ಕೊಡುವುದು ಎಂದು. ಅದನ್ನು ತಾವು ಹೆಚ್ಚು ಮಾಡುತ್ತೀರಾ ಎಂದು ಕೇಳಿದಿರಿ. ಗೌರವ ಹೆಚ್ಚಾದರೆ ಗೌರವಧನ ಹೆಚ್ಚಾಗುತ್ತದೆ. ಗೌರವ ಕಡಿಮೆಯಾದರೆ ಗೌರವಧನ ಕಡಿಮೆಯಾಗುತ್ತದೆ.

ಶ್ರೀ ಕೆ.ಎಸ್. ಪುಟ್ಟಣ್ಣಯ್ಯ : ಅದು ಹೇಗೆ ಆಗುತ್ತದೆಂದು ಹೇಳಿ.

ಅಧ್ಯಕ್ಷರು : ನೀವು ಒಬ್ಬರೇ ಬನ್ನಿ ಹೇಳಿಕೊಡುತ್ತೇನೆ. ಶ್ರೀರಾಮರೆಡ್ಡಿಯವರನ್ನು ಕರೆದುಕೊಂಡು ಬರಬೇಡಿ.

ಶ್ರೀ ಎನ್. ಯೋಗೀಶ್ ಭಟ್ : ಮಾನ್ಯ ಅಧ್ಯಕ್ಷರೇ, ನಾನು ಹೇಳುವಂತಾದ್ದು ಏನೆಂದರೆ ಇದಕ್ಕೆ ಆರ್.ಡಿ. ಡೆಪಾಸಿಟನ್ನು ಅಂಗನವಾಡಿ ಕಾರ್ಯಕರ್ತರ ಮೂಲಕ ಸಂಗ್ರಹ ಮಾಡುತ್ತಿದ್ದಾರೆ. ಎನ್‌ಎಸ್‌ಸಿ ಅನ್ನೂ ಸಹ ಸಂಗ್ರಹ ಮಾಡುತ್ತಿದ್ದಾರೆ. ಅದಕ್ಕೆ ಸಂಬಂಧಪಟ್ಟ ಕಮಿಷನ್ ಆದರೂ ಅವರಿಗೆ ಕೊಟ್ಟರೆ ಹೆಚ್ಚಿನ ಒಂದು ಹಣ ಸಂಗ್ರಹ ಮಾಡುವುದಕ್ಕೆ ಅನುಕೂಲವಾಗುತ್ತದೆ.

ಅಧ್ಯಕ್ಷರು : ಆ ಪ್ರಶ್ನೆಯನ್ನು ಮಾನ್ಯ ಆರ್ಥಿಕ ಸಚಿವರನ್ನು ಕೇಳಬೇಕು.

ಶ್ರೀ ಎನ್. ಯೋಗೀಶ್ ಭಟ್ : ಆ ಒಂದು ಕಮಿಷನ್ ಕೊಟ್ಟರೆ ಅನುಕೂಲವಾಗುತ್ತದೆ. ಇನ್ನು ಎರಡನೆಯದಾಗಿ ಎಲ್ಲಾ ಸರ್ವೇಗಳನ್ನು ಅದು ಮತದಾರರ ಸರ್ವೇ ಇರಬಹುದು, ಅಂಗವಿಕಲರ ಸರ್ವೇ ಇರಬಹುದು ಎಲ್ಲಾ ಸರ್ವೇಗಳನ್ನು ಅವರು ಉಪಯೋಗ ಮಾಡಿಕೊಳ್ಳುತ್ತಿದ್ದಾರೆ. ಈ ಸರ್ವೇ ನಡೆಸುವಂತಹ ಸಂದರ್ಭದಲ್ಲಿ ಅವರಿಗೆ ಸಂಭಾವನೆಯನ್ನಾದರೂ ಕೊಡಬಹುದು. ಈ ಬಗ್ಗೆ ಸರ್ಕಾರ ಗಮನ ಹರಿಸಬೇಕೆಂದು ಹೇಳುತ್ತೇನೆ.

ಶ್ರೀಮತಿ ವಿಮಲಾಬಾಯಿ ಜಗದೇವರಾವ್ ದೇಶ್‌ಮುಖ್ : ಮಾನ್ಯ ಅಧ್ಯಕ್ಷರೇ, ಅವರಿಗೆ ಅವತ್ತಿನ ದಿನಭತ್ಯೆಯನ್ನು ನಾವು ಕೊಡುತ್ತೇವೆ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ : ಮಾನ್ಯ ಅಧ್ಯಕ್ಷರೇ, ಆ ಅಂಗನವಾಡಿ ಕೇಂದ್ರಗಳ ಮಹತ್ವದ ಬಗ್ಗೆ ನಮಗೆಲ್ಲರಿಗೂ ಅರಿವಿರುವುದರಿಂದ ಈ ಕಟ್ಟಡವನ್ನು ಪೂರ್ಣಗೊಳಿಸುವುದಕ್ಕೆ ತ್ವರಿತಗತಿಯಲ್ಲಿ ಒಂದು ನೀಲಿ ನಕ್ಷೆಯನ್ನು ಸಿದ್ಧಪಡಿಸಿದರೆ ಒಳ್ಳೆಯದು. ಏಕೆಂದರೆ ಅಲ್ಲಿ ರಸ್ತೆ ಮಾಡುವುದಕ್ಕೆ ನಬಾರ್ಡಿನಿಂದ ಒಂದು ಯೋಜನೆಯನ್ನು ತೆಗೆದುಕೊಂಡಿದ್ದೇವೆ. ಕುಡಿಯುವ ನೀರಿಗೆ ವಿಶ್ವಬ್ಯಾಂಕ್ ಯೋಜನೆಯಿಂದ ತೆಗೆದುಕೊಂಡಿದ್ದೇವೆ. ಅದೇ ರೀತಿ ಈ ಅಂಗನವಾಡಿ ಕಟ್ಟಡಕ್ಕೆ ವಿಶೇಷವಾಗಿ ಒಂದು ಯೋಜನೆಯನ್ನು ತ್ವರಿತಗತಿಯಿಂದ ಮುಗಿಸಿ ಕೊಡುವುದಕ್ಕೆ ಸರ್ಕಾರ ಅದನ್ನು ಸಿದ್ಧಪಡಿಸಬೇಕು.

ಅಧ್ಯಕ್ಷರು : ನಿಮ್ಮ ಸಲಹೆ ಯೋಗ್ಯವಾದುದು. ಅದನ್ನು ಪರಿಶೀಲನೆ ಮಾಡಿ.

ಡಾ||ಎಂ.ಪಿ. ಕರ್ಕಿ : ಮಾನ್ಯ ಅಧ್ಯಕ್ಷರೇ, ಅನೇಕ ಬಾಲವಾಡಿಗಳು ಸರ್ಕಾರದ ಶಿಕ್ಷಣ ಇಲಾಖೆ ವತಿಯಿಂದ ನಡೆಸುತ್ತಿರುವಂಥಾದ್ದನ್ನು ಬಂದ್ ಮಾಡಿದ್ದಾರೆ. ಆ ಬಾಲವಾಡಿಯಲ್ಲಿ ಇದ್ದಂತಹ ಹುಡುಗರು ಏನಿದ್ದಾರೆ ಅವರಿಗೆ ಒಂದು ಅಂಗನವಾಡಿ ಕೇಂದ್ರವನ್ನು ಪ್ರಾರಂಭ ಮಾಡುತ್ತೀರಾ?

ಶ್ರೀಮತಿ ವಿಮಲಾಬಾಯಿ ಜಗದೇವರಾವ್ ದೇಶ್‌ಮುಖ್ : ಮಾನ್ಯ ಅಧ್ಯಕ್ಷರೇ, ಬಾಲವಾಡಿಗಳು ಮಾನ್ಯ ಪ್ರಾಥಮಿಕ ಶಿಕ್ಷಣ ಸಚಿವರಿಗೆ ಬರುತ್ತದೆ. ಅವರೇ ನಿರ್ಧಾರ ತೆಗೆದುಕೊಳ್ಳಬಹುದು. ಅಂಗನವಾಡಿ ಇದರಲ್ಲಿ ಬರುವುದಿಲ್ಲ.

ಅಧ್ಯಕ್ಷರು : ಆ ಅಂಗನವಾಡಿಗಳು ಪ್ರಾಥಮಿಕ ಶಿಕ್ಷಣದ ವ್ಯಾಪ್ತಿಗೆ ಬರುತ್ತದೆ. ಆದ್ದರಿಂದ ಅವರೇ ಅದನ್ನು ಮಾಡಬೇಕು. ಅಗತ್ಯ ಇದ್ದರೆ ಮಾಡಬಹುದು.

ಡಾ||ಎಂ.ಪಿ. ಕರ್ಕಿ : ಅನೇಕ ವರ್ಷಗಳಿಂದ ಸರ್ಕಾರ ನಡೆಸುತ್ತಿದ್ದ ಬಾಲವಾಡಿಗಳು ಇವತ್ತು ಬಂದ್ ಮಾಡಿದ್ದಾರೆ. ಅಲ್ಲಿರತಕ್ಕಂಥ ಶಿಕ್ಷಕಿಯರನ್ನು ಶಿಕ್ಷಣ ಇಲಾಖೆಗೆ ತೆಗೆದುಕೊಂಡಿದ್ದಾರೆ.

ಅಧ್ಯಕ್ಷರು : ಮಾನ್ಯ ಮಂತ್ರಿಯವರು ಏನು ಹೇಳುತ್ತಾರೆಂದರೆ, ಹಿಂದೆ ಬಾಲವಾಡಿಗಳನ್ನು ಸರ್ಕಾರ ನಡೆಸುತ್ತಿದ್ದು, ಮತ್ತೆ ಅಲ್ಲಿ ಪ್ರಾರಂಭ ಮಾಡಿಸುವುದು ಶಿಕ್ಷಣ ಇಲಾಖೆಗೆ ಬರುತ್ತದೆ. ಬಾಲವಾಡಿ ಬಂದ್ ಆಗಿರುವ ಕಡೆಯಲ್ಲಿ ಐ.ಸಿ.ಡಿ.ಎಸ್ ನಿಂದ ಅಂಗನವಾಡಿ ತೆರೆಯುತ್ತೀರಾ?

ಶ್ರೀಮತಿ ವಿಮಲಾಬಾಯಿ ಜಗದೇವರಾವ್ ದೇಶ್‌ಮುಖ್ : ಆ ಮಕ್ಕಳು ಬೇಕಾದರೆ ಅಂಗನವಾಡಿಗೆ ಬರಬಹುದು.

ಅಧ್ಯಕ್ಷರು : ಬಾಲವಾಡಿ ಬಂದ್ ಆಗಿ ಅಲ್ಲಿರುವ ಮಕ್ಕಳು ಏನೂ ವ್ಯವಸ್ಥೆ ಇಲ್ಲದೆ ಹೋದರೆ ಅಲ್ಲಿ ನೀವು ಅಂಗನವಾಡಿ ತೆರೆಯುತ್ತೀರಾ?

ಶ್ರೀಮತಿ ವಿಮಲಾಬಾಯಿ ಜಗದೇವರಾವ್ ದೇಶ್‌ಮುಖ್ : ಅದರ ಬಗ್ಗೆ ನಾವು ಪರಿಶೀಲನೆ ಮಾಡುತ್ತೇವೆ.

ಶ್ರೀಮತಿ ಬಿ.ಟಿ. ಲಲಿತಾನಾಯಕ್ : ನಾವು ಶಾಸಕರು ಅದನ್ನೂ ಮಾಡಿಕೊಳ್ಳಬೇಕು. ಬಾಲವಾಡಿ ಮುಚ್ಚಿದ್ದರೆ, ನಮಗೆ ಅಂಗನವಾಡಿ ಕೊಡಿ ಎಂದು ಒಂದು ಅಪ್ಲಿಕೇಷನ್ ಹಾಕಿಕೊಂಡರೆ ಅವರು ಕೊಡುತ್ತಾರೆ. ಕೇಂದ್ರದಿಂದ ಹಣ ಬಿಡುಗಡೆಯಾಗುತ್ತದೆ. ಅವನ್ನು ಮಾಡಬಹುದು.

ಅಧ್ಯಕ್ಷರು : ಮಂತ್ರಿಯಾದವರು ಸರ್ಕಾರದ ಭಾಷೆಯನ್ನು ಕಲಿತುಕೊಳ್ಳಬೇಕು. ಪರಿಶೀಲಿಸುತ್ತೇನೆ ಎಂದು ಹೇಳಿಬಿಟ್ಟರೆ ಮಂತ್ರಿಗಿರಿ ಪರಿಪೂರ್ಣವಾದ ಹಾಗೆ ಆಯಿತು.

ಶ್ರೀ ಕೆ.ಎಸ್. ಪುಟ್ಟಣ್ಣಯ್ಯ : ಹೊಸ ಅಂಗನವಾಡಿಗಳನ್ನು ಕೊಡುವಂತಾದ್ದು ಕೇಂದ್ರ ಸರ್ಕಾರ.

ಡಾ|| ಎಂ.ಪಿ. ಕರ್ಕಿ : ಇದು ಸರ್ಕಾರದ ಜವಾಬ್ದಾರಿ. ಸರ್ಕಾರ ಏನ ಕೆಲಸ ಮಾಡುತ್ತದೆಂದು ಹೇಳಬೇಕು.

ಅಧ್ಯಕ್ಷರು : ಅವರು ಪರಿಶೀಲನೆ ಮಾಡುತ್ತೇವೆಂದು ಹೇಳಿದ್ದಾರೆ. ಅದು ಅನಂತ. ಸಮುದ್ರಕ್ಕೆ ಕೊನೇ ಮೊದಲು ಯಾವುದು? ಪರಿಶೀಲನೆ ಅಷ್ಟೆ, ಅನಂತ ಕೊನೇ ಇಲ್ಲದ್ದು.

ಡಾ|| ಎಂ.ಪಿ. ಕರ್ಕಿ : ಮಕ್ಕಳ ಭವಿಷ್ಯದ ದೃಷ್ಟಿಯಿಂದ ಸರ್ಕಾರ ಹಿಡಿಯಾಗಿ ಯೋಚನೆ ಮಾಡಬೇಕಾಗುತ್ತದೆ.

ಅಧ್ಯಕ್ಷರು : ಶ್ರೀಮತಿ ಲಲಿತಾನಾಯಕ್‌ರವರು ಹೇಳಿದ ಹಾಗೆ, ನಮ್ಮ ನಮ್ಮ ಕ್ಷೇತ್ರಗಳಲ್ಲಿ ಅಂಗನವಾಡಿ ಎಲ್ಲೆಲ್ಲಿ ಪ್ರಾರಂಭ ಮಾಡಬೇಕೆಂದು ಯೋಚನೆ ಮಾಡಿ ಎಲ್ಲಿ ಮಕ್ಕಳು ಹೆಚ್ಚಿನ ಸಂಖ್ಯೆಯಲ್ಲಿ ಇದ್ದಾರೆ ಅಂತಹ ಊರಿನಲ್ಲಿ ಅದನ್ನು ಪ್ರಾರಂಭ ಮಾಡಿ. ಅದಕ್ಕೆ ಮಾನ್ಯ ಮಂತ್ರಿಯವರು ಮಾಡುವುದು ಏನಿದೆ?

ಡಾ|| ಎಂ.ಪಿ. ಕರ್ಕಿ : ಅದು ಆಗುವುದಿಲ್ಲ.

(ಗೊಂದಲ)

ಅಧ್ಯಕ್ಷರು : ಅಷ್ಟು ಜನ ಒಂದೇ ಸಾರಿಗೆ ಮಾತನಾಡಿದರೆ ಹೇಗೆ? ನನಗೆ ಒಂದೇ ಕಿವಿ ಕೇಳುವುದು.

ಡಾ|| ಎಂ.ಪಿ. ಕರ್ಕಿ : ಎಲ್ಲೆಲ್ಲಿ ಅಂಗನವಾಡಿ ಕೊಡಬೇಕೆಂದು ಈಗಾಗಲೇ ಮಂಜೂರಾಗಿ ಫಿಕ್ಸ್ ಆಗಿದೆ. ಮತ್ತೇ ಹೆಚ್ಚಿನ ಅಂಗನವಾಡಿ ದೊರೆಯುತ್ತಿಲ್ಲ. ಹಾಗೆ ಇದ್ದಾಗ ಸರ್ಕಾರ ಬಾಲವಾಡಿಗಳನ್ನು ಬಂದ್ ಮಾಡಿ ಆ ಹುಡುಗರ ಭವಿಷ್ಯವನ್ನು ಏನು ಮಾಡುವುದಕ್ಕೆ ಇಚ್ಚಿಪಡುತ್ತದೆ?

ಅಧ್ಯಕ್ಷರು : ಅದನ್ನೇ ಅವರು ಹೇಳುತ್ತಿರುವುದು, ಎಲ್ಲಿ ಅಗತ್ಯ ಇದೆ, ಎಲ್ಲಿ ಬಾಲವಾಡಿಗಳನ್ನು ಶಿಕ್ಷಣ ಇಲಾಖೆಯವರು ಮುಚ್ಚಿದ್ದಾರೆ ಅಲ್ಲಿ ಅಂಗನವಾಡಿ ಪ್ರಾರಂಭ ಮಾಡುವುದಕ್ಕೆ ಪರಿಶೀಲನೆ ಮಾಡುತ್ತೇನೆಂದು ಹೇಳಿದ್ದಾರೆ.

ಮೈಸೂರು ನಗರದಲ್ಲಿ ಕೊಳಚೆ ನಿರ್ಮೂಲನಾ ಮಂಡಲಿಯ ಮನೆಗಳು

415 -ಶ್ರೀ ಎ. ರಾಮದಾಸ್ (ಕೃಷ್ಣರಾಜ) : ಮಾನ್ಯ ವಸತಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮೈಸೂರು ನಗರದಲ್ಲಿ ಕಳೆದ 4 ವರ್ಷಗಳಲ್ಲಿ ಕೊಳಚೆ ಮಂಡಳಿಯಿಂದ ನಿರ್ಮಿಸಿರುವ ಒಟ್ಟು ಮನೆಗಳ ಸಂಖ್ಯೆ ಎಷ್ಟು? ಯಾವ ಯಾವ ಪ್ರದೇಶದಲ್ಲಿ ಎಷ್ಟೆಷ್ಟು ಮನೆ ನಿರ್ಮಾಣ ಆಗಿದೆ ಹಾಗೂ ಇದಕ್ಕೆ ಖರ್ಚಾಗಿರುವ ಹಣ ಎಷ್ಟು?

ಆ) ಈ ಅವಧಿಯಲ್ಲಿ ವಾಸಕ್ಕೆ ಸ್ವಾಧೀನ ನೀಡಿರುವ ಮನೆಗಳೆಷ್ಟು? ಮನೆ ಕೆಲಸ ಮುಗಿದಿದ್ದರೂ ಅವರ ಸ್ವಾಧೀನಕ್ಕೆ ನೀಡದಿರುವ ಮನೆಗಳ ಸಂಖ್ಯೆ ಎಷ್ಟು?

ಇ) ಈ ರೀತಿ ಸ್ವಾಧೀನಕ್ಕೆ ನೀಡದಿರುವುದಕ್ಕೆ ಕಾರಣಗಳೇನು?

ಈ) ಕೊಳಚೆ ಪ್ರದೇಶಗಳ ಬೆಳವಣಿಗೆ ತಡೆಯಲು ಸರ್ಕಾರದವರು ಕೈಗೊಂಡಿರುವ ಕ್ರಮಗಳೇನು?

ಶ್ರೀ ಹೆಚ್.ಡಿ. ರೇವಣ್ಣ (ವಸತಿ ಸಚಿವರು) :

ಅ) ಒಟ್ಟು 144 ಮನೆಗಳು

(ಲಕ್ಷ ರೂ.ಗಳಲ್ಲಿ)

ಕ್ರ. ಸಂ.	ಪ್ರದೇಶ	ನಿರ್ಮಾಣ ವಾಗಿರುವ ಮನೆಗಳು	ಖರ್ಚಾಗಿರುವ ಹಣ
1.	ಜನತಾ ಸಾಮಿಲ್ ಹಿಂಭಾಗದ ಕೊಳಚೆ ಪ್ರದೇಶ	12	8.50
2.	ಕ್ಯಾತಮಾರನಹಳ್ಳಿ ಬಡಾವಣೆ	48	15.60
3.	ನೆಲ್ಲೂರ್ ಶೆಡ್	84	27.00

ಆ) ಹಿಂದಿನ ಸಾಲುಗಳಲ್ಲಿ ನಿರ್ಮಿಸಲಾಗಿದ್ದು ಹಂಚಿಕೆಯಾಗದೆ ಬಾಕಿ ಉಳಿದಿದ್ದು ಒಟ್ಟು 259 ಮನೆಗಳನ್ನು 1995-96ನೇ ಸಾಲಿನಿಂದ 1998-99ನೇ ಸಾಲಿನ ಅವಧಿಯಲ್ಲಿ ಫಲಾನುಭವಿಗಳ ವಾಸಕ್ಕಾಗಿ ಸ್ವಾಧೀನಕ್ಕೆ ನೀಡಲಾಗಿದೆ. ಕೆಲಸ ಪೂರ್ಣಗೊಂಡಿದ್ದು, ಸ್ವಾಧೀನಕ್ಕೆ ನೀಡದಿರುವ ಮನೆಗಳು ಯಾವುದು ಇರುವುದಿಲ್ಲ.